


**ಗಮನ ಸೆಳೆದ ಲೇಖನ**

ಮುಖಪುಟ ಲೇಖನ ಸುಧಾ ಹೆಗಡೆಯವರ 'ಫಿಟ್‌ನೆಸ್ ನೃತ್ಯ' ಗಮನ ಸೆಳೆಯಿತು.

-ಪಿ.ಗೋವಿಂದರಾಜ್, ಶಿವಮೊಗ್ಗ

**ಮೊದಲ ಮಳೆಯ ಎಚ್ಚರಿಕೆ**

ಮೊದಲ ಮಳೆ! (ಗ.ಮ. ತುಂಬೇ ಮನೆ) ದಣಿದು ಬಸವಳಿದು ಸುಮ್ಮನೆ ತಾತ್ಕಾಲಿಕ ನಿದ್ದೆಗೆ ಜಾರಿರುವ ಭೂಮಿಯನ್ನು ಎಬ್ಬಿಸುತ್ತದೆ ಎಂದರೆ ತಪ್ಪಲ್ಲ.

-ನಿತ್ಯ ಎಸ್., ಮೂಡಬಿದಿರೆ

**ಅಂದದ ಚಿತ್ರಬರಹ**

ಬಿ.ಎಸ್.ರವಿಕುಮಾರರ 'ಹೆಬ್ಬೆ ಜಲಪಾತ' ಚಿತ್ರಬರಹ ಚೆನ್ನಾಗಿ ಮೂಡಿಬಂದಿದೆ. ಚಿತ್ರಗಳು ಆಕರ್ಷಕವಾಗಿದ್ದವು. 'ಸುಧಾ' ಪತ್ರಿಕೆಯಲ್ಲಿ ಹೆಬ್ಬೆ ಜಲಪಾತದ ಕುರಿತು ಓದಿದ ನಂತರ ಅದನ್ನು ನೋಡಲೇಬೇಕು ಎಂದು ಮನಸ್ಸಾಗುತ್ತಿದೆ.

-ಪಿ.ಎಸ್. ನಾರಾಯಣ ಭಟ್, ಕೊಯಿಲತೋಟ

**ದೃಢ ನಿಶ್ಚಯ ಅಗತ್ಯ**

'ಮದಿರೆಗೆ ಶರಣಾಗುವ ಮಾನಿನಿಯರು' ಓದಿದೆ. ನವ ನಾಗರಿಕತೆ! ಪಾಶ್ಚಾತ್ಯರ ಅನುಕರಣೆ– ಇವುಗಳಿಂದ ಈ 'ರೋಗ' ಪ್ರಾರಂಭವಾಗಿದೆ! ಲೇಖಕಿ ರಾಜೇಶ್ವರಿ ಜಯಕೃಷ್ಣ ಹೇಳಿದಂತೆ ದೃಢ ನಿಶ್ಚಯದ ಮೂಲಕ ಈ ವ್ಯಸನದಿಂದ ದೂರ ಆಗಬೇಕು.

-ನಾರಾಯಣ ಯಾಜಿ, ಶಿರಾಲಿ

**ಕುತೂಹಲಕಾರಿ ಕಥೆ**

ಸತ್ಯಬೋಧ ಅವರ 'ಕೆಂಡಮಲ್ಲಿಗೆ' ಕುತೂಹಲದಿಂದ ಓದಿಸಿಕೊಂಡು ಹೋಯಿತು. ಇತ್ತೀಚೆಗೆ ನಮ್ಮ ಮೆಚ್ಚಿನ 'ಸುಧಾ' ಪತ್ರಿಕೆಯಲ್ಲಿ ಹಾಸ್ಯಬರಹಗಳು ಪ್ರಕಟವಾಗುತ್ತಿರುವುದು ಸಂತಸ ನೀಡಿದೆ. ಕಥೆ ಹಾಗೂ ಹಾಸ್ಯ ಬರಹಗಳನ್ನು ಹೆಚ್ಚಾಗಿ ಪ್ರಕಟಿಸಿರಿ.

ಕೊಹಿಮ, ಬಸರಕೋಡು/ ಎಚ್.ಎಸ್.ವಿಶ್ವನಾಥ, ಶಿವಮೊಗ್ಗ

**ಮನಸೆಳೆದ ಅರಮನೆ**

ಆನಂದ ತೀರ್ಥ ಪ್ಯಾಟಿ ಅವರ ಪದ್ಮನಾಭಪುರಂನ ಕಾಷ್ಠ ಅರಮನೆ ಕುರಿತ ಲೇಖನ ಹಾಗೂ ಚಿತ್ರಗಳು ಮನಸೆಳೆದವು.

-ಟಿ.ಎನ್. ಸರಸ್ವತಿ, ತಿಪಟೂರು/ ಡಾ.ಕೆ.ಕೆ.ಜಯಚಂದ್ರ ಗುಪ್ತ, ಹಾಸನ

**ಇದು ಸಮಂಜಸವೆ?**

'ನೀವು ಕೇಳಿದಿರಿ' ಅಂಕಣದಲ್ಲಿ ಎಂ.ಎಸ್. ಧರ್ಮೇಂದ್ರರ ಪ್ರಶ್ನೆಯೊಂದಕ್ಕೆ ರಾಮ್ ಅವರು ವಿಧಾನಸೌಧದ ನಿರ್ಮಾತೃಗಳನ್ನು ಇಂದಿನ ಭ್ರಷ್ಟ ರಾಜಕಾರಣಿಗಳಿಗೆ ಹೋಲಿಸಿ ಅಪಹಾಸ್ಯ ಮಾಡಿದ್ದು ಎಷ್ಟು ಸಮಂಜಸ?

-ಉಷೆ ವಿ. ಪಡುಬಿದ್ರಿ ಹೆಜ್ಮಾಡಿ

ಜೈಲುವಾಸಿಗಳು ಸಹ ವಿಧಾನಸೌಧ ಕಟ್ಟಡದ ಕಾರ್ಮಿಕರಾಗಿದ್ದರು ಎಂಬುದು ರಾಮ್ ಅವರ ಉತ್ತರದ ಅರ್ಥ.

-ಸಂ.

## ಆಸಕ್ತಿ ಕೆರಳಿಸಿದ 'ಜಂಬೂಕ'

ಟಿ.ತಿಮ್ಮಪ್ಪ ಅವರ 'ಜಂಬೂಕ' ಕಾದಂಬರಿ ಆಸಕ್ತಿ ಕೆರಳಿಸಿ ಆಕರ್ಷಕವಾಗಿ ಓದಿಸಿಕೊಂಡು ಹೋಗುತ್ತಿದೆ. ಕಾಡಿನ ಪರಿಚಯ ಚೆನ್ನಾಗಿದೆ.

-ಎ.ಪಿ.ಶಾರದಮ್ಮ, ಹಾಸನ

**ವಾಸ್ತವ ಚಿತ್ರಣ**

ಅಂಕಿತ ಕಣ್ಮರೆಯಾದ ಮೇಲೆ ತಂದೆ ತಾಯಿಗಳ ನೋವು ವಾಸ್ತವವಾಗಿ, ಸಹಜವಾಗಿ ಮೂಡಿ ಬಂದಿದೆ.

-ಬಿ.ಮಂಜುನಾಥ್, ಬೆಂಗಳೂರು



**ಧಾರಾವಾಹಿಯ ಸಂದೇಶ**

ಎಂಜಿನಿಯರ್ ಇರಲಿ, ಏನೇ ಇರಲಿ– ಹುಡುಗಾಟ ಆಡಲು ಹೋದರೆ ಏನಾಗುತ್ತದೆ ಎಂಬ ಸಂದೇಶ 'ಜಂಬೂಕ' ಕಾದಂಬರಿಯಲ್ಲಿದೆ.

-ಬಿ.ಬಸವರಾಜ, ಚಿಕ್ಕಮಗಳೂರು



